## ಕರ್ನಾಟಕ ಸರ್ಕಾರ

### ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ಇವರು ಹೊರಡಿಸಿದ ನಡವಳಿಗಳು

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ಪ್ರಕರಣದಲ್ಲಿ ದಿನಾಂಕ: 09-02-2017ರ ತೀರ್ಪಿನ ಹಿನ್ನೆಲೆಯಲ್ಲಿ ಅಧೀಕ್ಷಕರು ದರ್ಜೆ-2 ವೃಂದದ ನೌಕರರ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾನಿಯಮ-1), ಸಿಆಸುಇ/ 182/ ಸೇನೆನಿ/2011, ದಿನಾಂಕ:06.05.2017.
2. ಅಧೀಕ್ಷಕರು ದರ್ಜೆ-2 ವೃಂದದ ನೌಕರರ ದಿನಾಂಕ 27.04.1978 ರಿಂದ ದಿನಾಂಕ 01.01.2017. ರವರೆಗಿನ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ; ಮಮಅಇ/ಜೇಷ್ಠತೆ/ಮೇಚಾ/25/2017-18 ದಿನಾಂಕ: 05/08/2017.

ಪ್ರಸ್ತಾವನೆ: ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ 2368/2011 ಬಿ.ಕೆ. ಪವಿತ್ರ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ: 09.02.2017 ರಂದು ನೀಡಿರುವ ತೀರ್ಪಿನಲ್ಲಿ ರಾಜ್ಯ ಸರ್ಕಾರದ ನಾಗರೀಕ ಸೇವೆಗಳನ್ನು **"Karnataka Determination of Seniority of Govt servants promoted on the basis of Reservation Act 2002"** ರ ಸೆಕ್ಷನ್ 3 ಮತ್ತು 4ನ್ನು ಸಂವಿಧಾನದ ಅನುಚ್ಛೇಧ 14 ಮತ್ತು 16 ನ್ನು ಅಧಿಕಾರಾತೀತ (**ultra vires**) ಎಂದು ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ (1) ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ನೀಡಿರುವ ಮುಂಬಡ್ತಿಗಳಲ್ಲಿ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ನೌಕರರಿಗೆ ಮೀಸಲಾತಿ ಅನುಸರಿಸಿರುವ ಅಧಿಕಾರಿಗಳ/ನೌಕರರ ಜೇಷ್ಠತಾ ಪಟ್ಟಿಗಳನ್ನು ಪುನರ್‌ಪರಿಶೀಲಿಸಲು ಆದೇಶಿಸಲಾಗಿದೆ. ಅದರಂತೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ಹೊರಡಿಸಲಾಗಿರುವ ಅಧಿಕಾರಿ/ನೌಕರರ ಜೇಷ್ಠತೆಯನ್ನು ಪುನರ್ ಪರಿಶೀಲಿಸಿ, ಉಲ್ಲೇಖ-2 ರ ಪರಿಷ್ಕೃತ ತಾತ್ಕಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ 13.11.2017 ರಂದು ಇಲಾಖಾ ವೆಬ್ ಸೈಟ್ ಸಂಖ್ಯೆ: **http://dwcdkar.gov.in** ರಲ್ಲಿ ಪ್ರಕಟಿಸಲಾಗಿತ್ತು. ಸದರಿ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿದ ಸ್ಥಾನ ಹಾಗೂ ನಮೂದಿಸಲಾದ ಸೇವಾ ವಿವರಗಳ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನೌಕರರು ತಮ್ಮ ನಿಲುವನ್ನು ಸಮರ್ಥಿಸುವಂತಹ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಕಛೇರಿಯ ಮುಖ್ಯಸ್ಥರುಗಳ ಮೂಲಕ. ವೆಬ್‌ಸೈಟನಲ್ಲಿ ಆದೇಶವನ್ನು ಪ್ರಕಟಿಸಿದ 30 ದಿನದೊಳಗಾಗಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಇದರನ್ವಯ ಸ್ವೀಕರಿಸಲಾಗಿರುವ ಆಕ್ಷೇಪಣೆಗಳನ್ನು ಪೂರಕ ದಾಖಲೆಯೊಂದಿಗೆ ನಿಯಮಾನುಸಾರ ಪರಿಶೀಲಿಸಿ, ಪರಿಗಣಿಸಲಾದ ಆಕ್ಷೇಪಣೆಗಳನ್ನು ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗೆ ಸೂಕ್ತ ಮಾರ್ಪಾಡುಗಳನ್ನು ಪರಿಷ್ಕೃತ ಅಂತಿಮ ಜ್ಯೇಷ್ಠತಾ ಪಟ್ಟಿಯಲ್ಲಿ ಅಳವಡಿಸಿಕೊಂಡು ಸರಿಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅಧೀಕ್ಷಕರು ದರ್ಜೆ-2 ವೃಂದದ ನೌಕರರ ದಿನಾಂಕ 27.04.1978 ರಿಂದ ದಿನಾಂಕ 01.01.2017. ರವರೆಗಿನ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು, ಅನುಬಂಧ-1 ಸ್ಥಳಿಯೇತರ ವೃಂದ (ಉಳಿಕೆ ವೃಂದ) (**NHKP**), ಅನುಬಂಧ-2 ಪ್ರಾದೇಶೀಕ ರಾಜ್ಯವ್ಯಾಪಿ ವೃಂದ ಮತ್ತು ಅನುಬಂಧ-3 ಪ್ರಾದೇಶಿಕ ಸ್ಥಳೀಯ ವೃಂದ (**HKP**) ನ್ನು ಪ್ರಕಟಿಸಲು ಇಲಾಖೆಯು ನಿರ್ಧರಿಸಿದ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸಂ: ಮಮಅಇ/ಜೇಷ್ಠತೆ/ಅಧೀ-2/38/2017-18

ನಿರ್ದೇಶಕರ ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು ದಿನಾಂಕ: 11/01/2018

### ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳನ್ವಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀಕ್ಷಕರುದರ್ಜೆ-2 ವೃಂದದ ನೌಕರರ ದಿನಾಂಕ:27.04.1978 ರಿಂದ 01.01.2017 ರವರೆಗಿನ ಜೇಷ್ಠತೆಯನ್ನು